ಸಾಕ್ಷಿದಾರರಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಟಿಪಿ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಹಾಜರುಪಡಿಸಿರುವ ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ1 ಎಂದು ಸರ್ವೆ ನಂಬರ್ 1/6 ರ ಪಹಣಿ ಪತ್ರಿಕೆಯ ದೃಡಿಕೃತ ನಕಲನ್ನು ನಿಪಿ2 ಎಂದು, ದಿನಾಂಕಃ 28.10.2004 ರ ಕ್ರಯ ಪತ್ರದ ದೃಡಿಕೃತ ನಕಲನ್ನು ನಿಪಿ3 ಎಂದು, ಸರ್ವೆ ನಂಬರ್ 1/2, 6/3 ಎ, 6/3 ಊ, 14/2 ಮತ್ತು 1/6 ನೆ ದವುಗಳ ಪಹಣಿ ಪತ್ರಿಕೆಗಳ ಕ್ರಮವಾಗಿ ನಿಪಿ4 ರಿಂದ ನಿಪಿ 8 ರವರೆಗೆ ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವಕಾಶ ಕೇಳಿರುತ್ತಾರೆ, ನೀಡಲಾಯಿತು).

(ಸಾಕ್ಷಿದಾರರು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿದಾರರಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮಾಗಡಿ.